ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 21-9-2016

# ಪತ್ರಿಕಾ ಆಮಂತ್ರಣ

1. ಕೊಪ್ಪಳ ಜಿಲ್ಲೆಯ ಕಿನ್ನಾಳ ಕಲೆಯ ಪುನರುಜ್ಜೀವನ ಕಾರ್ಯಾಗಾರ ಹಾಗೂ ಪ್ರದರ್ಶನ.
   ತೊಗಲುಗೊಂಬೆ
   ಮುಖ್ಯ ಅತಿಥಿ: ಡಾ. ಕೆ. ಚಿನ್ನಪ್ಪಗೌಡ, ಉಪ ಕುಲಪತಿಗಳು, ಜಾನಪದ ವಿಶ್ವವಿದ್ಯಾಲಯ, ಶಿಗ್ಗಾಂವ, ಹಾವೇರಿ ಜಿಲ್ಲೆ.
   ಮುಖ್ಯ ಆಹ್ವಾನಿತರು: ಶ್ರೀಮತಿ ಸುಧಾ ವಿ. ರೆಡ್ಡಿ, ಚಿತ್ರಕಲಾ ಪರಿಷತ್‌ನ ಟ್ರಸ್ಟಿ.
   ಅಧ್ಯಕ್ಷತೆ: ಡಾ. ಬಿ. ಎಲ್. ಶಂಕರ್, ಅಧ್ಯಕ್ಷರು, ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು.
   ಸಮಯ: ದಿನಾಂಕ: 22-09-2016 ಗುರುವಾರ ಸಂಜೆ 6-00 ಗಂಟೆಗೆ
   ಸ್ಥಳ: ಚಿತ್ರಕಲಾ ಪರಿಷತ್ ಆವರಣ, ಕುಮಾರ ಕೃಪಾ ರಸ್ತೆ, ಬೆಂಗಳೂರು – 560 001.

2. ಬೆಂಗಳೂರು ಅರಮನೆ ರಸ್ತೆಯಲ್ಲಿರುವ ನವೀಕೃತಗೊಂಡ "ಕಾವೇರಿ ಅತಿಥಿ ಗೃಹ"
   ಉದ್ಘಾಟನೆ: ಸಿದ್ದರಾಮಯ್ಯ, ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ.
   ವಿಶೇಷ ಆಹ್ವಾನಿತರು:
   ಡಿ. ಹೆಚ್. ಶಂಕರಮೂರ್ತಿ, ಸಭಾಪತಿಗಳು, ಕರ್ನಾಟಕ ವಿಧಾನ ಪರಿಷತ್
   ಕೆ.ಬಿ. ಕೋಳಿವಾಡ್, ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ.
   ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಶಾಸಕರು, ಗಾಂಧಿನಗರ ವಿಧಾನಸಭಾ ಕ್ಷೇತ್ರ.
   ಸ್ಥಳ: ಕಾವೇರಿ ಅತಿಥಿ ಗೃಹ, ಅರಮನೆ ರಸ್ತೆ, ಬೆಂಗಳೂರು.
   ದಿನಾಂಕ: 22-09-2016, ಸಮಯ: ಬೆಳಿಗ್ಗೆ 11-00 ಗಂಟೆಗೆ
3. ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ 3ನೇ ಹಂತದ ರಸ್ತೆ, ಅಭಿವೃದ್ಧಿ ಕಾಮಗಾರಿಗಳ ಚಾಲನಾ ಸಮಾರಂಭ.
   ಉದ್ಘಾಟನೆ: ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.
   ಪ್ರಾಸ್ತಾವಿಕ ಭಾಷಣ ಹಾಗೂ ಕಿರುಹೊತ್ತಿಗೆ ಬಿಡುಗಡೆ: ಡಾ. ಹೆಚ್.ಸಿ. ಮಹದೇವಪ್ಪ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು.
   ಅಧ್ಯಕ್ಷತೆ: ಆರ್. ರೋಷನ್ ಬೇಗ್, ನಗರಾಭಿವೃದ್ಧಿ ಹಾಗೂ ಹಜ್ ಸಚಿವರು.
   ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು – 560 001
   ದಿನಾಂಕ: 22-09-2016, ಸಮಯ: ಬೆಳಿಗ್ಗೆ 11-30 ಗಂಟೆಗೆ

<u>ಪತ್ರಿಕಾ ಪ್ರಕಟಣೆ</u>

# ಸುರಕ್ಷಿತ ಮತ್ತು ಪರಿಣಾಮಕಾರಿ ಜಾನುವಾರು ಲಸಿಕೆಗಳು ಆಧುನಿಕ ಸಮಾಜಕ್ಕೆ ಅತ್ಯಗತ್ಯ – ಸಚಿವ ಮಂಜು

**ಬೆಂಗಳೂರು ಸೆಪ್ಟೆಂಬರ್ 21:**

ಸುರಕ್ಷಿತ ಮತ್ತು ಪರಿಣಾಮಕಾರಿ ಪ್ರಾಣಿ ಲಸಿಕೆಗಳು ಆಧುನಿಕ ಸಮಾಜಕ್ಕೆ ಅತ್ಯಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯು ರಾಷ್ಟ್ರೀಯ ವಿಕಾಸ ಯೋಜನೆಯಡಿ ಜಿಎಂಪಿ (ಗುಡ್ ಮ್ಯಾನುಫ್ಯಾಕ್ಚರಿಂಗ್ ಪ್ರಾಕ್ಟೀಸಸ್),ಲಸಿಕಾ ಸಂಶೋಧನೆ ಮತ್ತು ಅಭಿವೃದ್ದಿ ಘಟಕವನ್ನು ಹೊಂದುವ ಮೂಲಕ ರೈತರಿಗೆ ಅನುಕೂಲಕರ ನಿಟ್ಟಿನಲ್ಲಿ ಕಾರ್ಯನಿರ್ವಹಣೆಗೆ ಮುಂದಾಗಿರುವುದು ಶ್ಲಾಘನೀಯ ಎಂದು ಪಶುಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಎ. ಮಂಜು ಅವರು ತಿಳಿಸಿದರು.

ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಇಂದು ಹೆಬ್ಬಾಳದ ಹೈನು ಮಹಾವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಂಡಿದ್ದ "ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ'ಯಡಿ ನೂತನ ಜಿ.ಎಂ.ಪಿ. ಲಸಿಕೆ ತಯಾರಿಕೆ ಸೌಲಭ್ಯ, ಲಸಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಘಟಕದ ಉದ್ಘಾಟನೆ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಾ, ಜಾನುವಾರು ಅಭಿವೃದ್ಧಿಗೆ ಪ್ರಮುಖ ಅಡಚಣೆಯಾಗಿರುವುದು ಜಾನುವಾರು ರೋಗಗಳು. ಈ ಜಾನುವಾರು ರೋಗಗಳು ರೈತ ಸಮುದಾಯಕ್ಕೆ ತೀವ್ರ ಆರ್ಥಿಕ ನಷ್ಟವುಂಟು ಮಾಡುತ್ತಿವೆ ಎಂದರು.

ಜಾನುವಾರು ರೋಗಗಳನ್ನು ಆರಂಭದಲ್ಲೇ ಪತ್ತೆ ಹಚ್ಚಲು ಹೊಸ ರೋಗ ನಿರ್ಣಯದ ತಂತ್ರಗಳನ್ನು ಮತ್ತು ಲಸಿಕೆಗಳನ್ನು ಸಕಾಲದಲ್ಲಿ ಸಂಶೋಧನೆ ಮಾಡದೇ ಹೋದರೆ ಜಾನುವಾರುಗಳ ವಿಲಕ್ಷಣ ರೋಗಗಳು ಸ್ಥಳೀಯ ರೋಗಗಳಾಗಿ ಹರಡಿ ರೈತರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಒಳಗಾಗುವ ಸಾಧ್ಯತೆ ಇದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಹೊಸ ಲಸಿಕೆ ಅಭಿವೃದ್ದಿ ಮತ್ತು ರೋಗ ನಿರ್ಣಯ ಸಂಶೋಧನೆಗೆ ಅತ್ಯಾಧುನಿಕ ಸೌಲಭ್ಯವನ್ನು ಸಂಸ್ಥೆಯು ಹೊಂದಿದ್ದು, ಅಸ್ತಿತ್ವದಲ್ಲಿರುವ ಹಾಗೂ ಉದಯೋನ್ಮುಖ ರೋಗಗಳ ಲಸಿಕೆಗಳ ಸಂಶೋಧನೆಗಾಗಿ ಈ ಕೇಂದ್ರಕ್ಕೆ ಅಗತ್ಯವಿರುವ ಎಲ್ಲಾ ಉಪಕರಣಗಳನ್ನು ಒದಗಿಸಲಾಗಿದೆ ಎಂದರು.

ಸರ್ಕಾರಿ ಮಾನ್ಯತೆ ಹೊಂದಿದ ಪ್ರಪ್ರಥಮ ಸಂಸ್ಥೆ ಎಂಬ ಹೆಗ್ಗಳಿಗೆ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ಪಾತ್ರವಾಗಲಿದ್ದು, ರಾಜ್ಯದ ರೈತರು ಈ ಸಂಸ್ಥೆಯ ಸದುಪಯೋಗ ಪಡೆದುಕೊಳ್ಳುವಂತೆ ಸಚಿವರು ಕರೆ ನೀಡಿದರು.

ಕೃಷಿ ಸಚಿವ ಕೃಷ್ಣಬೈರೇಗೌಡ ಅವರು ಮಾತನಾಡುತ್ತಾ, 1926 ರಲ್ಲಿ ಮೈಸೂರು ರಾಜಮನೆತನದವರ ದೂರದೃಷ್ಟಿಯ ಫಲವಾಗಿ ಅಂದು ಆರಂಭಗೊಂಡ 'ಮೈಸೂರು ಸೀರಮ್ ಸಂಸ್ಥೆ' ಇಂದು ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯಾಗಿ ಮರುನಾಮಕರಣಗೊಂಡು ಲಸಿಕೆ ತಯಾರಿಕೆ ಮತ್ತು ರೋಗ ತಪಾಸಣಾ ಕ್ಷೇತ್ರದಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಸಂಸ್ಥೆಯ ಲಸಿಕೆ ತಯಾರಿಕೆ ವಿಭಾಗದಲ್ಲಿ ಅನೇಕ ವೈರಾಣು ಲಸಿಕೆಗಳು, ಬ್ಯಾಕ್ಟೀಯ ಲಸಿಕೆಗಳು ಮತ್ತು ರೋಗ ನಿರ್ಣಯದ ಪ್ರತಿ ಜನಕಗಳನ್ನು ಉತ್ಪಾದಿಸುತ್ತಿದ್ದು, ವರ್ಷದಲ್ಲಿ 6-7 ಕೋಟಿ ಡೋಸ್‌ಗಳ ಲಸಿಕೆ ಉತ್ಪಾದಿಸಿ ಪಶುಸಂಗೋಪನೆ ಇಲಾಖೆಯ ಮುಖಾಂತರ ರೈತರಿಗೆ ಉಚಿತವಾಗಿ ಸರಬರಾಜು ಮಾಡುತ್ತಿರುವುದು ಶ್ಲಾಘನೀಯ ಎಂದರು.

ಸಂಸ್ಥೆಯು ದೇಶದಲ್ಲೇ ಪ್ರಥಮ ಬಾರಿಗೆ ನೀಲಿನಾಲಿಗೆ ಲಸಿಕೆ, ಟಿಶ್ಯು ಕಲ್ಚರ್ , ಹಂದಿಜ್ವರದ ಲಸಿಕೆ ಹಾಗೂ ಬಾತುಕೋಳಿ ಜ್ವರ ಲಸಿಕೆ, ಕ್ಲಸ್ಟ್ರಿಡಿಯಾ ಪರ್‌ಫ್ರಿಂಜೆನ್ಸಿ ಟೈಪ್ ಎ ಲಸಿಕೆ, ಮೇಕೆ ಸಿಡುಬು ಮತ್ತು ಮೈಕೋಪ್ಲಾಸ್ಮಾ ರೋಗ ನಿರ್ಣಯಕಗಳನ್ನು ಅಭಿವೃದ್ದಿಪಡಿಸಿ ಉತ್ಪಾದಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಪಶುಸಂಗೋಪನೆ ದಿನ ದಿನ ಬೆಳೆಯುತ್ತಿದ್ದು, ಕೃಷಿ ಕ್ಷೇತ್ರಕ್ಕಿಂತ ಹೆಚ್ಚಿನ ಆದಾಯವನ್ನು ರೈತರಿಗೆ ಒದಗಿಸುತ್ತಿದೆ. ಅಲ್ಲದೆ, ಪಶುಸಂಗೋಪನೆ ಉತ್ಪಾದನೆಗಳು ಮಾನವನ ದಿನನಿತ್ಯದ ಸೇವಿಸುವಿಕೆ (ಡೈಲಿ ಇನ್‌ಟೇಕ್) ನಲ್ಲಿ ಹೆಚ್ಚಿನ ಪಾತ್ರವಹಿಸುತ್ತಿವೆ ಎಂದರು.

ಇದಕ್ಕೂ ಮುನ್ನ ನೂತನ ಜಿ.ಎಂ.ಪಿ. ಲಸಿಕೆ ತಯಾರಿಕಾ ಸೌಲಭ್ಯ, ಲಸಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಘಟಕ ಹಾಗೂ ಹೈನು ಮಹಾವಿದ್ಯಾಲಯದ ಮುಖ್ಯದ್ವಾರವನ್ನು ಸಚಿವರುಗಳು ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಹೆಬ್ಬಾಳ ವಿಧಾನಸಭಾ ಕ್ಷೇತ್ರ ಶಾಸಕ ವೈ. ನಾರಾಯಣಸ್ವಾಮಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ಉಮಾಶಂಕರ್, ಇಲಾಖೆಯ ಆಯುಕ್ತರಾದ ಎಸ್. ಶೇಖರ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ನಿರ್ದೇಶಕರಾದ ಎಸ್.ಎಂ. ಬೈರೇಗೌಡ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಅತಿಥಿ ಗಣ್ಯರನ್ನು ಸ್ವಾಗತಿಸಿದರು.

ಮಮತಾ:ಜಿಪಿಆರ್.

# ಮನೆ ಮದ್ದಿಗಾಗಿ ಔಷಧಿಗಳು ಕುರಿತ ತರಬೇತಿ

ಬೆಂಗಳೂರು ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)

ತೋಟಗಾರಿಕೆ ಇಲಾಖೆಯ ಜೈವಿಕ ಕೇಂದ್ರ, ಹುಳಿಮಾವು ಬೆಂಗಳೂರು ಇಲ್ಲಿ ಸೆಪ್ಟೆಂಬರ್ 24 ರಂದು *ಮನೆ ಮದ್ದಿಗಾಗಿ ಔಷಧಿ ಗಿಡಗಳು* ಕುರಿತ ತರಬೇತಿ ಕಾರ್ಯಕ್ರಮವನ್ನು ನಗರವಾಸಿಗಳಿಗೆ/ರೈತರಿಗೆ/ಸಾರ್ವಜನಿಕರಿಗೆ/ವಿದ್ಯಾರ್ಥಿಗಳಿಗೆ ಒಂದು ದಿನದ ತರಬೇತಿಯನ್ನು ಹಮ್ಮಿಕೊಂಡಿದೆ.

ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಆಸಕ್ತರು ರೂ 300/- ಗಳನ್ನು ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು ಇವರ ಕಚೇರಿಯಲ್ಲಿ ತರಬೇತಿಯ ಒಂದು ದಿನ ಮುಂಚಿತವಾಗಿ ನೊಂದಣಿ ಮಾಡಿಕೊಳ್ಳಬಹುದಾಗಿದೆ.

ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 26582775, 26584904 ಅಥವಾ ಇ-ಮೇಲ್ Sadh.co2014@gmail.com, biocentre.hulimavu@gmail.com ಅನ್ನು ಸಂಪರ್ಕಿಸಬಹುದಾಗಿದೆ.

ಹೆಚ್‌ಕೆ:ಪಿಎಸ್‌ಐ:ಜಿಪಿಆರ್.

# ಅರ್ಜಿ ಸಲ್ಲಿಸಲು ಅವಧಿ ವಿಸ್ತರಣೆ

ಬೆಂಗಳೂರು ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)

ಕರ್ನಾಟಕ ಶಿಲ್ಪಕಲಾ ಕ್ಷೇತ್ರದಲ್ಲಿ ದುಡಿಯುತ್ತಿರುವ ವಿದ್ವಾಂಸರಿಗೆ ಒತ್ತಾಸೆ ನೀಡುವ ದೃಷ್ಟಿಯಿಂದ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು 2016-17 ನೇ ಸಾಲಿನ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶಿಲ್ಪಕಲಾ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಪರಿಣಿತರಿಗೆ ಒಂದು ಲಕ್ಷ ರೂಪಾಯಿಗಳ ಫೆಲೋಶಿಫ್ ನೀಡಲು ನಿರ್ಧರಿಸಿದ್ದು ಈ ವಿಷಯದಲ್ಲಿ ಆಸಕ್ತರಾಗಿರುವವರಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಸಾಕಷ್ಟು ಅರ್ಜಿಗಳು ಬಾರದೇ ಇರುವುದರಿಂದ ಸದರಿ ಅರ್ಜಿಗಳನ್ನು ಸ್ವೀಕರಿಸುವ ದಿನಾಂಕವನ್ನು ವಿಸ್ತರಿಸಿದೆ.

ಸಂಪ್ರಬಂಧಕಾರರು ಫೆಲೋಶಿಫ್‌ಗಾಗಿ ತಮ್ಮ ಸ್ವ ಪರಿಚಯವನ್ನು, ಕ್ಷೇತ್ರದಲ್ಲಿ ತಮಗಿರುವ ಅನುಭವವನ್ನು ದಾಖಲಿಸುತ್ತಾ, ಸಂಪ್ರಬಂಧದ ವಿಷಯದ ವಿವರ ಮತ್ತು ವ್ಯಾಪ್ತಿಯ ಬಗ್ಗೆ ಐದರಿಂದ–ಆರು ಪುಟಗಳಲ್ಲಿ ಪರಿಚಯವನ್ನು ಸಂಗ್ರಹಿಸಿದ ಅರ್ಜಿಯನ್ನು ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು – 560 002 ಇವರಿಗೆ ಅಕ್ಟೋಬರ್ 20 ರೊಳಗಾಗಿ ಸಲ್ಲಿಸಬೇಕು.

ಹೆಚ್‌ಕೆ:ಪಿಎಸ್‌ಐ:ಜಿಪಿಆರ್.

## ಮನೆಯಂಗಳದಲ್ಲಿ ಮಾತುಕತೆ – ತಿಂಗಳ ಅತಿಥಿಯಾಗಿ ಗಮಕ ವ್ಯಾಖ್ಯಾನಕಾರ ಡಾ. ಎ.ವಿ. ಪ್ರಸನ್ನ

ಬೆಂಗಳೂರು ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸೆಪ್ಟೆಂಬರ್ 24 ರ ಶನಿವಾರದಂದು ಸಂಜೆ 4–00 ಗಂಟೆಗೆ ನಗರದ ಜೆ. ಸಿ. ರಸ್ತೆಯಲ್ಲಿರುವ ಕನ್ನಡ ಭವನದ ನಯನ ಸಭಾಂಗಣದಲ್ಲಿ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಗಮಕ ವ್ಯಾಖ್ಯಾನಕಾರ ಡಾ. ಎ.ವಿ. ಪ್ರಸನ್ನ ಅವರು ಪಾಲ್ಗೊಳ್ಳಲಿದ್ದಾರೆ.

ಅಂದು ಮಧ್ಯಾಹ್ನ 3–00 ಗಂಟೆಗೆ ಶ್ರೀಮತಿ ಗಂಗಮ್ಮ ಕೇಶವಮೂರ್ತಿ ಮತ್ತು ವೃಂದದವರಿಂದ "ಕುವೆಂಪು ರಾಮಾಯಣ ದರ್ಶನಂ" ಗಮಕ ರೂಪಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಹೆಚ್‌ಕೆ:ಪಿಎಸ್‌ಐ:ಜಿಪಿಆರ್.

## ವಿವಿಧ ಜಾತಿ ಜನಾಂಗಗಳ ಬೇಡಿಕೆ ಕುರಿತಂತೆ ಬಹಿರಂಗ ವಿಚಾರಣೆ

ಬೆಂಗಳೂರು ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಬೆಂಗಳೂರು ನಗರ/ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿವಿಧ ಜಾತಿ ಜನಾಂಗಗಳ ಬೇಡಿಕೆಗಳ ಕುರಿತು ಅಕ್ಟೋಬರ್ 3 ಮತ್ತು 4 ರಂದು ಬೆಳಿಗ್ಗೆ 11–00 ಗಂಟೆಗೆ ಡಿ. ದೇವರಾಜ ಅರಸು

ಭವನದ ಆಡಿಟೋರಿಯಂ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು ಇಲ್ಲಿ ಸಾರ್ವಜನಿಕ ಬಹಿರಂಗ ವಿಚಾರಣೆಯನ್ನು ನಡೆಸಲಿದೆ.

ಸಾರ್ವಜನಿಕರಿಂದ, ಸಂಘ ಸಂಸ್ಥೆಗಳಿಂದ ಜಾತಿ, ಉಪ ಜಾತಿ, ಪಂಗಡ, ಉಪ ಪಂಗಡ, ಬುಡಕಟ್ಟು ಹಾಗೂ ಸಮೂಹಗಳ ಪರವಾಗಿ ಆಯೋಗಕ್ಕೆ ಮನವಿಗಳನ್ನು ಆಹ್ವಾನಿಸಿದೆ.

ಆಯೋಗದ ವೆಬ್‌ಸೈಟ್ **www.karnataka.gov.in/kscbc** ರಡಿ **questionnaire click** ಮಾಡಿ ಪ್ರಶ್ನಾವಳಿಯನ್ನು ಪಡೆದು ಮನವಿದಾರರು ತಮ್ಮ ಮನವಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಭರ್ತಿಮಾಡಿ ಆಫಿಡವಿಟ್ ಮಾಡಿಸಿ ಹತ್ತು ಪ್ರತಿಗಳನ್ನು ಸಿದ್ದಪಡಿಸಿ ಸಂಬಂಧಪಟ್ಟ ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ನಗರ/ ಗ್ರಾಮಾಂತರ ಜಿಲ್ಲೆ ಇವರಿಗೆ ಸಲ್ಲಿಸಬಹುದು.

ತಮ್ಮ ಮನವಿಗಳಿಗೆ ಸಂಬಂಧಿಸಿದಂತೆ ಬಹಿರಂಗ ವಿಚಾರಣೆಯ ದಿವಸ ತಾವು ಖುದ್ದಾಗಿ ಅಥವಾ ನ್ಯಾಯವಾದಿಗಳ ಮೂಲಕ ತಮ್ಮ ಅಹವಾಲನ್ನು ಮಂಡಿಸಬಹುದಾಗಿದೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಪ್ರಕಟಣೆ ತಿಳಿಸಿದೆ.

ಹೆಚ್‌ಕೆ:ಪಿಎಸ್‌ಐ:ಜಿಪಿಆರ್.

## ಭಾರತೀಯ ವಾಯು ಸೇನಾ ಸೇರ್ಪಡೆಗೆ ಅರ್ಜಿ ಆಹ್ವಾನ

**ಬೆಂಗಳೂರು ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)**

ಸೆಂಟ್ರಲ್ ಏರ್‌ಮನ್ ಸೆಲೆಕ್ಷನ್ ಬೋರ್ಡ್ ನಿಂದ ಭಾರತೀಯ ವಾಯು ಸೇನೆಯಲ್ಲಿ ಸೇವೆ ಸಲ್ಲಿಸಬಯಸುವ ಅವಿವಾಹಿತ ಪುರುಷ ಅರ್ಹ ಅಭ್ಯರ್ಥಿಗಳ ಅಯ್ಕೆಗಾಗಿ ಅರ್ಜಿ ಆಹ್ವಾನಿಸಿದೆ.

2017 ರ ಜನವರಿ, ಫೆಬ್ರವರಿಯಲ್ಲಿ ನಡೆಯುವ ಏರ್‌ಮನ್ ಗ್ರೂಪ್ X (ತಾಂತ್ರಿಕ) ಅಥವಾ Y ( ತಾಂತ್ರಿಕೇತರ) (Except Automobile Technician, GTI, IAF(P) IAF (S) ) and musician ಹುದ್ದೆಗಳಿಗೆ ಸಂದರ್ಶನ ನಡೆಯಲಿದೆ.

ವಿದ್ಯಾರ್ಹತೆ: ಗ್ರೂಪ್ X (ತಾಂತ್ರಿಕ) – ಇಂಟರ್‌ಮೀಡಿಯಟ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ, ಗಣಿತ, ಭೌತಶಾಸ್ತ್ರ, ಮತ್ತು ಇಂಗ್ಲೀಷ್ ನಲ್ಲಿ ಶೇಕಡ 50 ಅಂಕ ಪಡೆದು ಉತ್ತೀರ್ಣರಾಗಿರಬೇಕು. ಅಥವಾ ಮೂರು ವರ್ಷದ ಮೆಕಾನಿಕಲ್/ಎಲೆಕ್ಟ್ರಿಕಲ್/ಎಲೆಕ್ಟ್ರಾನಿಕ್ಸ್ /

ಐ.ಟಿ ನಲ್ಲಿ ಡಿಪ್ಲೊಮೊ, ಅಂಗೀಕೃತ ಪಾಲಿಟೆಕ್ನಿಕ್ ಇನ್ಸಿಸ್ಟಿಟ್ಯೂಟ್ ನಲ್ಲಿ ಶೇಕಡ 50 ಅಂಕ ಪಡೆದು ಪಾಸಾಗಿರಬೇಕು

ಗ್ರೂಪ್ "ವೈ" ತಾಂತ್ರಿಕೇತರ ಹುದ್ದೆಗೆ ಕೇಂದ್ರ ಮತ್ತು ರಾಜ್ಯಗಳ ಅನುಮೋದನೆ ಪಡೆದಿರುವ ಸಂಸ್ಥೆಗಳಲ್ಲಿ ಇಂಟರ್ ಮೀಡಿಯೇಟ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇಕಡ 50 ಅಂಕ ಪಡೆದು ತೇರ್ಗಡೆ ಹೊಂದಿರಬೇಕು.

ಗ್ರೂಪ್ "ಎಕ್ಸ್" ಮತ್ತು ಗ್ರೂಪ್ "ವೈ" ಎರಡೂ ಹುದ್ದೆಗಾಗಿ (ತಾಂತ್ರಿಕ ಮತ್ತು ತಾಂತ್ರಿಕೇತರ) ಅರ್ಜಿ ಸಲ್ಲಿಸಬಯಸುವವರು ಗಣಿತ, ಭೌತಶಾಸ್ತ್ರ ಹಾಗೂ ಇಂಗ್ಲೀಷ್ ಶೇ 50 ಅಂಕ ಪಡೆದು ತೇರ್ಗಡೆ ಹೊಂದಿರಬೇಕು.

ವಯೋಮಿತಿ: 1997 ರ ಜುಲೈ 7 ರಿಂದ ಡಿಸೆಂಬರ್ 20, 2000 ಅವಧಿಯಲ್ಲಿ ಜನಿಸಿದವರಾಗಿರಬೇಕು.

ವೇತನ: ರೂ 24,000/- ಇತರೆ ಭತ್ಯೆಗಳು ಸೇರಿ.

ಭರ್ತಿಮಾಡಿದ ಅರ್ಜಿಯನ್ನು ಆನ್‌ಲೈನ್ ಮೂಲಕ ಸೆಪ್ಟೆಂಬರ್ 29 ರೊಳಗೆ ಹಾಗೂ ಅಂಚೆ ಮೂಲಕ ಸಲ್ಲಿಸಬಯಸುವವರು ಅಕ್ಟೋಬರ್ 13 ರೊಳಗೆ ಅಧ್ಯಕ್ಷರು, ಕೇಂದ್ರ ಏರ್‌ಮೆನ್ ಆಯ್ಕೆ ಸಮಿತಿ, ಪೋಸ್ಟ್ ಬಾಕ್ಸ್ ನಂ. 11807, ನವದೆಹಲಿ - 110 010 ಇಲ್ಲಿಗೆ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಸೆಪ್ಟೆಂಬರ್ 3, 2016 ಎಂಪ್ಲಾಯ್‌ಮೆಂಟ್ ನ್ಯೂಸ್/ರೋಜಗರ್ ಸಮಾಚಾರ್ ನ್ನು ವೀಕ್ಷಿಸಬಹುದು. ಅಥವಾ ವೆಬ್‌ಸೈಟ್ www.airmenselection.gov.in ಅಥವಾ ನೇರವಾಗಿ ಸಂಪರ್ಕಿಸುವವರು ನಂ. 7, ಏರ್‌ಮೆನ್ ಸೆಲೆಕ್ಷನ್ ಸೆಂಟರ್, ಬೆಂಗಳೂರು, ದೂರವಾಣಿ ಸಂಖ್ಯೆ 080- 25592199 ರ ಮೂಲಕ ಸಂಪರ್ಕಿಸಬಹುದಾಗಿದೆ.

ಹೆಚ್‌ಕೆ:ಪಿಎಸ್‌ಐ:ಜಿಪಿಆರ್.

## <u>ವನ್ಯಜೀವಿ ಸಪ್ತಾಹ</u>

**ಬೆಂಗಳೂರು ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)**

**ಕಾವೇರಿ ವನ್ಯಜೀವಿ ವಿಭಾಗ ಕೊಳ್ಳೇಗಾಲ ಇವರ ವತಿಯಿಂದ ಅಕ್ಟೋಬರ್–2016ರ ಮಾಹೆಯ ಮೊದಲನೇ ವಾರದಲ್ಲಿ 62 ನೇ ವನ್ಯಜೀವಿ ಸಪ್ತಾಹವನ್ನು ಆಚರಿಸಲು ಉದ್ದೇಶಿಸಲಾಗಿದೆ. ಇದರ ಅಂಗವಾಗಿ ಶಾಲಾ/ಕಾಲೇಜು ವಿದ್ಯಾರ್ಥಿಗಳಿಂದ ಹಾಗೂ ಸಾರ್ವಜನಿಕರಿಂದ ಕರ್ನಾಟಕ ರಾಜ್ಯದಲ್ಲಿ ಅತಿ ವಿಸ್ಮಯಗೊಳ್ಳುವ ವನ್ಯಪ್ರಾಣಿ ಛಾಯಾಚಿತ್ರಗಳ ಸ್ಪರ್ಧಾತ್ಮಕ ಪರೀಕ್ಷೆಯನ್ನು (Wildlife Wonders of Karnataka) ನಡೆಸಲು ಉದ್ದೇಶಿಸಲಾಗಿದೆ. ಇಚ್ಛೆಯುಳ್ಳ ಶಾಲಾ/ಕಾಲೇಜು ವಿದ್ಯಾರ್ಥಿಗಳು 29–9–2016 ರೊಳಗಾಗಿ ಮಾಹಿತಿ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಗೆ dcfcauverywl@gmail.com ಅಥವಾ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾವೇರಿ ವನ್ಯಜೀವಿ ವಿಭಾಗ, ಕೊಳ್ಳೇಗಾಲ 571 440, 1) ಶ್ರೀಮತಿ ಅನುಪಮ ಎಸಿಎಫ್ 8884507916, 2) ಬಿ.ಸಿ. ಲೋಕೇಶ ಆರ್‌ಎಫ್‌ಓ 9449919966 3) ಎನ್. ಪುಟ್ಟನಂಜಯ್ಯ, 9448648297 ನ್ನು ಸಂಪರ್ಕಿಸಬಹುದಾಗಿದೆ.**

## Indian Air Force Recruitment

Bangalore, September 21 (Karnataka Information)

Indian Air Force Invites applications from suitable candidates for technical and non technical posts for selection test in January 2017. Candidates with 50% aggregate marks in Physics, Mathematics and English or 50% aggregate in diploma course in Engineering from a Government recognised Institute are eligible for group X technical posts.

Candidates with 50% in Intermediate 10+2 / equivalent examination aggregate marks in English approved by Central State Education Board are eligible for group Y non technical posts. Candidates should be born between 07 July 1997 to 20 December 2000 (both days inclusive) For online registration log on www.airmenselection.gov.in upto September 29, 2016. Forward hard copy of application to the following address by ordinary post only, so as to reach by 13 October 2016. Further information contact Airmen Selection Centre Bangalore on Telephone 080 25592199 email co.7asc_ka@gov.in

# Assumes Charge

Bangalore, September 21 (Karnataka Information)

Mohammad Mohsin, Secretary to Government, Minority Welfare, Haj and Wakf Department has assumed the charge of Administrator, Karnataka State Board of Wakf, Bengaluru with immediate effect.

## ಸದಸ್ಯತ್ವ ರದ್ದು

**ಬೆಂಗಳೂರು ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)**

ಡಾ: ಸಿ.ಪಿ. ನಾಗರಾಜ, ಸದಸ್ಯರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ಇವರ ಸದಸ್ಯತ್ವವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಿ ಆದೇಶ ಮಾಡಲಾಗಿದೆ.

## ರಂಗಾಯಣ ನಿರ್ದೇಶಕರ ನೇಮಕ

**ಬೆಂಗಳೂರು ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)**

ನಿರ್ದೇಶಕರು, ಮೈಸೂರು ರಂಗಾಯಣ ಇವರ ಅಧಿಕಾರಾವಧಿಯು ದಿನಾಂಕ: 30-9-2016 ರಂದು ಮುಕ್ತಾಯವಾಗಲಿರುವ ಹಿನ್ನೆಲೆಯಲ್ಲಿ, ಶ್ರೀ ಕೆ. ಎ. ದಯಾನಂದ, ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರನ್ನು ನಿರ್ದೇಶಕರು, ಮೈಸೂರು ರಂಗಾಯಣ ಹುದ್ದೆಗೆ ಆ ದಿನಾಂಕದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಧಿಕ ಪ್ರಭಾರದಲ್ಲಿರಿಸಿ ಆದೇಶಿಸಿದೆ.

ಖಾಲಿ ಇರುವ ಕಲಬುರಗಿ ರಂಗಾಯಣ ನಿರ್ದೇಶಕರ ಹುದ್ದೆಗೆ ಶ್ರೀ ಕೆ.ಹೆಚ್. ಚೆನ್ನೂರ, ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಲಬುರಗಿ ವಲಯ ಇವರನ್ನು ಹಾಗೂ ಶಿವಮೊಗ್ಗ ರಂಗಾಯಣ ನಿರ್ದೇಶಕರ ಹುದ್ದೆಗೆ ಶ್ರೀ ಬಲವಂತರಾವ್ ಪಾಟೀಲ್, ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ವಲಯ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಧಿಕ ಪ್ರಭಾರದಲ್ಲಿರಿಸಿ ಆದೇಶಿಸಿದೆ.

## ಕೌಶಲ್ಯಭಿವೃದ್ಧಿ ತರಬೇತಿ ಕಾರ್ಯಕ್ರಮ

**ಬೆಂಗಳೂರು ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)**

2016-17 ನೇ ಸಾಲಿನಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆಗೆ ವಿಶೇಷ ಘಟಕಯೋಜನೆ ಮತ್ತು ಗಿರಿಜನ

ಉಪಯೋಜನೆಯಡಿಯಲ್ಲಿ ಕೌಶಲ್ಯಭಿವೃದ್ಧಿ ತರಬೇತಿ ಕಾರ್ಯಕ್ರಮದಡಿ 3 ತಿಂಗಳ ಅವಧಿಯ ತರಬೇತಿ ನೀಡಲಾಗುವುದು. ಆಸಕ್ತರು ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560 010 ಇವರಿಗೆ ದಿನಾಂಕ: 24–9–2016 ರೊಳಗೆ ಈ ಕಚೇರಿಯಿಂದ ಪಡೆದು, ಅರ್ಜಿಯನ್ನು ಭರ್ತಿ ಮಾಡಿ ಸಲ್ಲಿಸಬಹುದು. ಅಲ್ಲದೆ ದಿನಾಂಕ 27–9–2016 ರಂದು ಬೆಳಿಗ್ಗೆ 11–00 ಗಂಟೆಗೆ ಸಂದರ್ಶನಕ್ಕೆ ಮೂಲ ದಾಖಲಾತಿಗಳೊಡನೆ ಹಾಜರಾಗಲು ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರು ನಗರ ಜಿಲ್ಲೆ ದೂರವಾಣಿ: 23501481, 23501478 ಇವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.